crores. They want 20000 acres land.

ಶ್ರೀ ಆರ್.ವಿ.ದೇಶಪಾಂಡೆ: ಯಾವ ರಾಜ್ಯದಲ್ಲಿ, ಯಾವ ದೇಶದಲ್ಲಿ ಇಂಥ ಪ್ರಾಜೆಕ್ಟ್‌ಗಳನ್ನು ಕ್ಲಿಯರ್ ಮಾಡಲು ಜಾಯಿಂಟ್‌ಸೆಲೆಕ್ಟ್ ಕಮಿಟಿಯನ್ನು ಮಾಡಿದ್ದಾರೆ? ಎಲ್ಲಿ ಮಾಡಿದ್ದಾರೆ ಎಂಬ ಉದಾಹರಣೆ ಕೊಡಿ. ರೆಕಾರ್ಡ್ಸ್ ನೋಡಿ....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಇಲ್ಲಿಯವರೆಗೆ 10 ಪ್ರಾಜೆಕ್ಟ್‌ಗಳನ್ನು ಕ್ಲಿಯರ್ ಮಾಡಿರಬೇಕು. ಆ ಹತ್ತು ಪ್ರಾಜೆಕ್ಟ್‌ಗಳಿಗೆ ಎಂದಾದರೂ ಜಾಯಿಂಟ್ ಸೆಲೆಕ್ಟ್ ಕಮಿಟಿ ಮಾಡಿ ಎಂದು ಕೇಳಿದ್ದಾರೋ? ಇದಕ್ಕೆ ಏಕೆ ಕೇಳಿದ್ದಾರೆ ಅಂದರೆ 2000 ಕೋಟಿ ರೂ.ಗಳ ವೆಚ್ಚದಲ್ಲಿ ಕೇವಲ 110 ಕಿಮೀ. ಉದ್ದದ ರಸ್ತೆ ಮಾಡಲು ಬಂದಂಥ ಸಂದರ್ಭದಲ್ಲಿ ಮತ್ತು ಅದಕ್ಕೆ ಕಂಪ್ಯಾರಿಸನ್ ಸ್ಟೇಟ್‌ಮೆಂಟ್ ಮತ್ತು ಕೆಲಸ ಮಾಡತಕ್ಕಂಥವರಿದ್ದಾಗ....

SRI M.C.NANAIAH:- We are not investing that money. A private enterpreneur is spending the money.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾರೋ ಖರ್ಚು ಮಾಡುತ್ತಾರೆ ಅಂದರೆ ಅದರ ಅರ್ಥ ಏನು?

ಶ್ರೀ ಎಂ.ಸಿ.ನಾಣಯ್ಯ: ಇದಕ್ಕೆ ಸರಕಾರದವರೇ ಹಣವನ್ನು ಖರ್ಚುಮಾಡುತ್ತಿದ್ದಾರೆ ಎಂಬ ಭಾವನೆಯಲ್ಲಿ ತಾವು ಮಾತನಾಡುತ್ತಿದ್ದೀರಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಯಾವಾಗ ನೀವು ಜಾಯಿಂಟ್‌ಸೆಲೆಕ್ಟ್ ಕಮಿಟಿಯನ್ನು ಮಾಡಲು ತಯಾರಾಗಿಲ್ಲ ಅಂದರೆ ಟ್ರಾನ್ಸ್‌ಫರೆನ್ಸಿ ಇದರಲ್ಲಿ ಇಲ್ಲ, ಆ ಟ್ರಾನ್ಸ್‌ಫರೆನ್ಸಿ ತೋರಿಸಲು ತಾವು ತಯಾರಾಗಿಲ್ಲ, ಇದನ್ನು ಮುಚ್ಚಿಡ ಬೇಕು, ಇದರಲ್ಲಿ ಇರುವ ಅಂಡರ್‌ಸ್ಟ್ಯಾಂಡಿಂಗ್‌ನ್ನು ತೋರಿಸ ಬಾರದು ಎಂಬ ಉದ್ದೇಶ ನಿಮ್ಮಲ್ಲಿದ್ದರೆ ನಾವು ಇದನ್ನು ಪ್ರತಿಭಟಿಸ ಬೇಕಾಗುತ್ತದೆ. ನಾವು ವಾಕ್‌ಔಟ್ ಮಾಡುತ್ತೇವೆ.

(ಕಾಂಗ್ರೆಸ್ (ಐ) ಪಕ್ಷದ ಸದಸ್ಯರುಗಳವರು ಸಭಾತ್ಯಾಗ ಮಾಡಿದರು)

ಶ್ರೀ ಸಿ.ಎಂ.ಉದಾಸಿ: ಮಾನ್ಯ ಸಭಾಧ್ಯಕ್ಷರೇ, ಈ ಯೋಜನೆ ಅಗ್ರಿಮೆಂಟ್ ಆದಮೇಲೆ ಕೇರಳರಾಜ್ಯದ ಲೋಕೋಪಯೋಗಿ ಸಚಿವರು ಕರ್ನಾಟಕಕ್ಕೆ ಬಂದಿದ್ದರು. ಅವರಿಗೆ ನಾವು ಇದನ್ನು ಪ್ರಸೆಂಟೇಷನ್ ಮಾಡಿದಾಗ ಅವರು ಇದು ಅತ್ಯಂತ ಉಪಯುಕ್ತವಾದ ಯೋಜನೆ ಎಂದು ಸ್ವಾಗತ ಮಾಡಿದ್ದಾರೆ- ಎಂಬುದನ್ನು ತಮ್ಮ ಗಮನಕ್ಕೆ ತರಲಿಚ್ಚಿಸುತ್ತೇನೆ.

ಅಧ್ಯಕ್ಷರು: ಈಗ ಸದನವನ್ನು 3.30ರ ವರೆಗೆ ಮುಂದೂಡುತ್ತೇನೆ.